


ಪ್ರಿಯಾಂಶ್ ಆರ್ಯ

## ಐಪಿಎಲ್ ಪವರ್ ಪ್ಲೇಯಲ್ಲಿ ಬಂದ ಗರಿಷ್ಠ ಸ್ಕೋರ್‌ಗಳು

| ಇಸವಿ | ತಂಡ–ಯಾರ ವಿರುದ್ಧ | ಸ್ಕೋರ್ | ಸ್ಥಳ |
|---|---|---|---|
| 2024 | ಎಸ್‌ಆರ್‌ಎಚ್‌Vs ಡಿಸಿ | 125/0 | ನವದೆಹಲಿ |
| 2024 | ಎಸ್‌ಆರ್‌ಎಚ್‌Vs ಎಲ್‌ಎಸ್‌ಜಿ | 107/0 | ಹೈದರಾಬಾದ್ |
| 2026 | ಎಸ್‌ಆರ್‌ಎಚ್‌Vs ಪಿಬಿಕೆಎಸ್ | 105/0 | ಚಂಡೀಗಢ |
| 2017 | ಕೆಕೆಆರ್‌Vs ಆರ್‌ಸಿಬಿ | 105/0 | ಬೆಂಗಳೂರು |
| 2014 | ಸಿಎಸ್‌ಕೆ Vs ಪಿನಿಕೆಎಸ್ | 100/2 | ಮುಂಬೈ |
| **ಐಪಿಎಲ್ ಪವರ್ ಪ್ಲೇಯಲ್ಲಿ ಬಂದ ಕನಿಷ್ಠ ಸ್ಕೋರ್‌ಗಳು** | | | |
| 2009 | ಆರ್‌ಆರ್ Vs ಆರ್‌ಸಿಬಿ | 14/2 | ಕೇಪ್‌ಟೌನ್ |
| 2002 | ಎಸ್‌ಆರ್‌ಎಚ್ Vs ಆರ್‌ಆರ್ | 14/3 | ಪುಣೆ |
| 2011 | ಸಿಎಸ್‌ಕೆ Vs ಕೆಕೆಆರ್ | 15/2 | ಕೋಲ್ಕತ್ತ |
| 2015 | ಸಿಎಸ್‌ಕೆ Vs ಡಿಸಿ | 16/1 | ರಾಯಪುರ |
| 2019 | ಸಿಎಸ್‌ಕೆ Vs ಆರ್‌ಸಿಬಿ | 16/1 | ಚೆನ್ನೈ |

### ಅಭಿಷೇಕ್-ಹೆಡ್ ತಂದಿತ್ತ ಬದಲಾವಣೆ

ಸನ್‌ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ತಂಡದ ಅಭಿಷೇಕ್ ಶರ್ಮಾ ಹಾಗೂ ಟ್ರಾವಿಸ್ ಹೆಡ್ ಆರಂಭಿಕ ಜೋಡಿಯ ನಿರ್ಭಿಡೆಯ ಬ್ಯಾಟಿಂಗ್‌ನಿಂದ ಪವರ್ ಪ್ಲೇ ರನ್‌ಗಳ ಗಳಿಕೆಯು ಗಣನೀಯವಾಗಿ ಹಿಗ್ಗುತ್ತಾ ಬಂದಿತು. ಸಾಮಾನ್ಯವಾಗಿ ಆರಂಭಿಕ ಬ್ಯಾಟರ್‌ಗಳು ಮೊದಲ ಎಂಟು–ಹತ್ತು ಎಸೆತಗಳನ್ನು ಪಿಚ್ ಮರ್ಮ ಅರಿಯಲು ಗಮನಿಸಬೇಕು ಎನ್ನುವುದು ಕ್ರಿಕೆಟ್‌ನ ಹಳೆಯ ಮೂಲಪಾಠ.

ಅದಕ್ಕೆ ಈಗ ತಿಲಾಂಜಲಿ ಇಟ್ಟಿರುವುದು ಸ್ಪಷ್ಟ. ಅದರಲ್ಲೂ ವೈಭವ್ ಸೂರ್ಯವಂಶಿ, ಅಭಿಷೇಕ್ ಶರ್ಮಾ, ಫಿಲ್‌ಸಾಲ್ಟ್, ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್ ಸಿಂಗ್ ಆಡುವ ವೇಗ ನೋಡಿದರೆ ಪವರ್ ಪ್ಲೇನಲ್ಲಿ ಆಡುವ ತಂತ್ರಗಾರಿಕೆ ಪೂರ್ಣಪ್ರಮಾಣದಲ್ಲಿ ಬದಲಾಗಿರುವುದು ಅರಿವಾಗುತ್ತದೆ.

ಈ ಸಲ ತಾವು ಆಡಿದ ಐದು ಪಂದ್ಯಗಳಲ್ಲಿ ರಾಜಸ್ಥಾನ ರಾಯಲ್ಸ್ (ಆರ್‌ಆರ್) ತಂಡದ ವೈಭವ್ ಸೂರ್ಯವಂಶಿ 263.15ರ ಸ್ಟ್ರೈಕ್ ರೇಟ್‌ನಲ್ಲಿ ರನ್ ಪೇರಿಸಿದರು.

ಪ್ರಿಯಾಂಶ್ ಮೂರು ಇನಿಂಗ್ಸ್‌ಗಳಲ್ಲಿ 264.10 ಸ್ಟ್ರೈಕ್ ರೇಟ್ ದಾಖಲಿಸಿದರೆ, ಐದು ಇನಿಂಗ್ಸ್‌ಗಳಲ್ಲಿ ಅಭಿಷೇಕ್ ಶರ್ಮಾ 215ರ ಸ್ಟ್ರೈಕ್ ರೇಟ್‌ನಲ್ಲಿ ರನ್‌ಗಳನ್ನು ಸೂರೆಗೊಂಡಿದ್ದಾರೆ.




ಅಭಿಷೇಕ್ ಶರ್ಮಾ